# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು

**ಸಿ.ಸಿ. ನಂ.992-2020 ಪಿ .ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಪ್ರಭುಸ್ವಾಮಿ ಎಸ್<br>ಬದನವಾಳು ಗ್ರಾಮ,  ನಂಜನಗೂಡು ತಾ. |
| | **ಸತ್ಯ ಪ್ರತಿಜ್ಞೆಯ ಮೇರೆಗೆ  ದಿನಾಂಕ 28-10-2024.** |

**<u>ಮುಂದುವರೆದ ಪಾಟೀ ಸವಾಲು ಆರೋಪಿ ಪರ ಶ್ರೀ ಎನ್.ಎಸ್  ವಕೀಲರಿಂದಃ-</u>**

ನಾನು ಆರೋಪಿಗೆ ಹಣ ನೀಡಿದ ಸಂಬಂಧ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸುವುದಾಗಿ ತಿಳಿಸಿದ್ದು, ಸದರಿ ದಾಖಲೆಗಳನ್ನು ಇನ್ನೂ ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಾನು ಆರೋಪಿಗೆ ದಿ.31.01.2020 ರಂದು ಸಾಲವಾಗಿ ಹಣ ನೀಡಿರುತ್ತೇನೆ. ನಾನು 3 ತಿಂಗಳ ನಂತರ ಯಾವ ದಿನಾಂಕದಂದು ಆರೋಪಿಯನ್ನು ಭೇಟಿ ಮಾಡಿ ಸಾಲ ಮರು ಪಾವತಿ ಮಾಡುವಂತೆ ಕೇಳಿದೆನು ಎಂಬುದನ್ನು ನೋಟಿಸ್‌ನಲ್ಲಾಗಲಿ, ನನ್ನ ಪಿರ್ಯಾದಿನಲ್ಲಾಗಲಿ ಹೇಳಿ ಬರೆಸಿರುವುದಿಲ್ಲ ಎಂದರೆ ಸರಿ. ಸಾಲ ಪಡೆದ 3 ತಿಂಗಳ ನಂತರ ಆರೋಪಿ ನನಗೆ ಸಿಕ್ಕಿರುವುದಿಲ್ಲ, ಆದರೆ ಸುಮಾರು ಒಂದು ವರ್ಷದ ಹತ್ತಿರ-ಹತ್ತಿರ ಅಂದರೆ 11 ನೇ ತಿಂಗಳ ಸುಮಾರಿಗೆ ನನಗೆ ಸಿಕ್ಕಿ ನನಗೆ ಚೆಕ್

ನೀಡಿರುತ್ತಾರೆ. ಆರೋಪಿ ನನಗೆ 11 ತಿಂಗಳ ಸುಮಾರಿಗೆ ಸಿಕ್ಕಿದಾಗ ನನಗೆ ಚೆಕ್ ನೀಡಿರುತ್ತಾರೆ. ನಾನು ಆರೋಪಿಗೆ ಹಣ ನೀಡಿದ ಸಂಬಂಧ ಹಾಗೂ ಆರೋಪಿ ನನ್ನಿಂದ ಹಣ ಪಡೆದ ಸಂಬಂಧ ಯಾವುದೇ ದಾಖಲಾತಿಗಳು ಆಗಿರುವುದಿಲ್ಲ. ಆರೋಪಿ ನನಗೆ 3 ತಿಂಗಳ ಒಳಗಾಗಿ ಹಣವನ್ನು ಮರುಪಾವತಿ ಮಾಡುತ್ತೇನೆ ಎಂದು ಹೇಳಿದ ಬಾಯಿ ಮಾತಿನ ಹೇಳಿಕೆಯ ಆಧಾರದ ಮೇರೆಗೆ ಆರೋಪಿಗೆ ಹಣ ನೀಡಿರುತ್ತೇನೆ ಎಂದರೆ ಸರಿ.

2. ನಾನು 2019 ರಲ್ಲಿ ನನ್ನ ಸೇವೆಯಿಂದ ನಿವೃತ್ತಿ ಹೊಂದಿರುತ್ತೇನೆ. ನಾನು ನಿವೃತ್ತಿ ಹೊಂದುವವರೆವಿಗೂ ಹೊಳೆನರಸೀಪುರದಲ್ಲಿ ವಾಸವಿದ್ದೆನು. ನಾನು ನಿವೃತ್ತಿ ಹೊಂದಿದ ನಂತರ ಮೈಸೂರಿನ ಇಲವಾಲ ಮತ್ತು ನಂಜನಗೂಡಿನಲ್ಲಿ ವಾಸವಾಗಿರುತ್ತೇನೆ. ನನ್ನ ಎರಡೂ ವಿಳಾಸವನ್ನು ನನ್ನ ಪಿರ್ಯಾದಿನಲ್ಲಿ ಹೇಳಿ ಬರೆಸಿರುವುದಿಲ್ಲ ಎಂದರೆ ಸರಿ.

3. ನಮ್ಮ ಕುಟುಂಬದ ಪಿತ್ರಾರ್ಜಿತ ಆಸ್ತಿಗಳೆಲ್ಲವೂ ನನ್ನ ಮತ್ತು ಸಹೋದರರ ಹೆಸರಿನಲ್ಲಿ ಖಾತೆ ಇರುತ್ತದೆ ಎಂದರೆ ಸರಿ. ನಮ್ಮ ಆಸ್ತಿಗಳನ್ನು ಅಡಮಾನ ಮಾಡಿ ನಂಜನಗೂಡಿನ ಐ.ಸಿ.ಐ.ಸಿ.ಐ ಬ್ಯಾಂಕಿನಿಂದ ಸಾಲವನ್ನು ಪಡೆದಿರುತ್ತೇನೆ ಎಂದರೆ ಸರಿ. ಆ ಸಂಬಂಧ ನಾನು ನಂಜನಗೂಡಿನ

ನೋಂದಣಾಧಿಕಾರಿಗಳ ಕಚೇಯಲ್ಲಿ ನೋಂದಣಿ ಮಾಡಿಸಿರುತ್ತೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಹಣವನ್ನು ನಾನು ಆರೋಪಿಗೆ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಅಡಮಾನ ಪತ್ರಕ್ಕೆ ಆರೋಪಿ ಮತ್ತು ಬದನವಾಳು ಗ್ರಾಮದ ಉಮೇಶ್ ಎಂಬುವವರು ಸಾಕ್ಷಿದಾರಾಗಿ ಸಹಿ ಮಾಡಿರುತ್ತಾರೆ ಎಂದರೆ ಸರಿ. ನಾನು ಬೆಳೆ ಸಾಲವನ್ನು 2014–15 ನೇ ಸಾಲಿನಲ್ಲಿ ಪಡೆದಿರುತ್ತೇನೆ. ಸದರಿ ಸಾಲವನ್ನು ನಾನು ಈಗ್ಗೆ 2 ವರ್ಷಗಳ ಹಿಂದೆ ತೀರುವಳಿ ಮಾಡಿರುತ್ತೇನೆ. ನಾನು ಬ್ಯಾಂಕಿನಿಂದ ಸಾಲ ಪಡೆಯುವ ಸಮಯ ಬ್ಯಾಂಕಿನವರು ಭದ್ರತೆಗಾಗಿ 3 ನೇ ವ್ಯಕ್ತಿಯಿಂದ ಚೆಕ್ಕುಗಳನ್ನು ಕೇಳುತ್ತಿದ್ದಾರೆ ಎಂದು ಹೇಳಿ ಆರೋಪಿಯಿಂದ ಸಹಿ ಮಾಡಿದ 3 ಖಾಲಿ ಚೆಕ್ಕುಗಳನ್ನು ಪಡೆದುಕೊಂಡಿದ್ದು, ಸದರಿ ಚೆಕ್ಕುಗಳ ಪೈಕಿ ಈ ಪ್ರಕರಣದ ಚೆಕ್ಕು ಸಹ ಸೇರಿರುತ್ತದೆ ಎಂದರೆ ಸರಿಯಲ್ಲ.

4.ಸುನಂದ ಎಂದರೆ ನನ್ನ ತಂಗಿ. ಸುನಂದ ರವರನ್ನು ಚಾಮರಾಜನಗರದ ನಂಜೇದೇವನಪುರ ಗ್ರಾಮಕ್ಕೆ ಕೊಟ್ಟು ವಿವಾಹ ಮಾಡಲಾಗಿರುತ್ತದೆ. ಸುನಂದ ಮತ್ತು ಅವರ ಪತಿ ಸ್ವಲ್ಪ ದಿನಗಳ ಕಾಲ ನಂಜೇದೇವನಪುರದಲ್ಲಿ ವಾಸವಿದ್ದು, ನಂತರ ಅವರನ್ನು ನಾನು ಬದನವಾಳು ಗ್ರಾಮಕ್ಕೆ ಕರೆತಂದಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರೇ ಬಂದಿರುತ್ತಾರೆ ಎಂದು ನುಡಿಯುತ್ತಾರೆ. ಸುನಂದ

ರವರು ಮತ್ತು ನನ್ನ ಅಜ್ಜಿ ಮತ್ತು ಸುಲೋಚನ ರವರು ನಮ್ಮ ಹಳೆ ಮನೆಯಲ್ಲಿ ವಾಸವಿದ್ದರು ಎಂದರೆ ಸರಿ. ನಾನು ಮತ್ತು ಸಹೋದರ ಬೇರೆಡೆ ವಾಸವಾಗಿದ್ದರಿಂದ ನನ್ನ ಸಹೋದರಿ ಸುನಂದ ಮತ್ತು ಅವರು ಪತಿಯವರೇ ಜಮೀನುಗಳನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ನಾವೇ ನೋಡಿಕೊಳ್ಳಿ ಎಂದು ಹೇಳಿರುತ್ತೇವೆ ಎಂದು ನುಡಿಯುತ್ತಾರೆ. ನಾನು ಮತ್ತು ನನ್ನ ಸಹೋದರ ನಿವೃತ್ತಿ ಆದ ನಂತರ ಸುನಂದ ಮತ್ತು ಅವರ ಪತಿಯವರನ್ನು ಜಮೀನನ್ನು ನೋಡಿಕೊಳ್ಳುವುದು ಬೇಡ ಹೊರ ಹೋಗುವಂತೆ ಹೇಳಿದ್ದರಿಂದ ಅವರು ಹೊರ ಹೋಗಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯ ಆರೋಪಿಯ ತಾಯಿ ತನಗೆ ಭಾಗಕೊಡುವಂತೆ ಕೇಳಿದ್ದು, ನಾವು ಭಾಗ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆರೋಪಿಯ ತಾಯಿ ಯಾವುದೇ ಭಾಗ ಕೇಳಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಮತ್ತು ನನ್ನ ಸಹೋದರ ಬಾಲಸಂಗಣ್ಣ ಆರೋಪಿಯ ತಾಯಿಯವರಿಗೆ ಯಾವುದೇ ಭಾಗವನ್ನು ನೀಡದೇ ಜಮೀನಿಂದ ಹೊರಹಾಕಿದ್ದರಿಂದ ಆರೋಪಿಯ ತಾಯಿಯವರು ಇದೇ ನ್ಯಾಯಾಲಯದಲ್ಲಿ ಅಸಲು ದಾವಾ ಸಂ.250/2019 ರಂತೆ ಭಾಗಾಂಶಕ್ಕಾಗಿ ದಾವೆ ಹೂಡಿರುತ್ತಾರೆ ಎಂದರೆ ಸಾಕ್ಷಿ ದಾವೆ ಹೂಡಿರುವುದು ಸರಿ, ಆದರೆ ನಾವು ಅವರನ್ನು ಜಮೀನಿನಿಂದ ಹೊರಹಾಕಿರುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿಯ ತಾಯಿಯವರು

ಭಾಗಾಂಶಕ್ಕಾಗಿ ದಾವೆ ಸಲ್ಲಿಸಿದ ನಂತರ ನನ್ನ, ಬಾಲಸಂಗಣ್ಣ, ಆರೋಪಿ ಮತ್ತು ಆರೋಪಿ ತಾಯಿಯವರ ನಡುವೆ ಗಲಾಟೆ ಆಗಿರುತ್ತದೆ ಎಂದರೆ ಸರಿಯಲ್ಲ. ಆರೋಪಿ ತಾಯಿಯವರು ನನ್ನ ವಿರುದ್ಧ ವಿಭಾಗಕ್ಕಾಗಿ ದಾವೆ ಸಲ್ಲಿಸಿದ ನಂತರ ಆರೋಪಿ ಮತ್ತು ಆತನ ತಾಯಿಯವರಿಗೆ ಪಾಠ ಕಲಿಸುವ ಉದ್ದೇಶದಿಂದ ಬ್ಯಾಂಕಿನ ಸಾಲದ ಭದ್ರತೆಗಾಗಿ ಆರೋಪಿಯಿಂದ ಪಡೆದಿದ್ದಂತಹ ಚೆಕ್ಕುಗಳನ್ನು ದುರುಪಯೋಗಪಡಿಸಿಕೊಂಡು ಆರೋಪಿ ವಿರುದ್ಧ ಈ ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಸೇವೆಯಿಂದ ನಿವೃತ್ತಿ ಆದ ನಂತರ ಬಂದ ಹಣದಿಂದ ಆರೋಪಿಗೆ ನಾನು ಹಣ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ದಿ.31-01-2021 ರಂದು ನಾನು ಮತ್ತು ಆರೋಪಿ ಖುದ್ದಾಗಿ ಭೇಟಿ ಆಗದೇ ಇರುವುದರಿಂದ ನನ್ನ ಮತ್ತು ಆರೋಪಿ ನಡುವೆ ಯಾವುದೇ ಹಣಕಾಸಿನ ವ್ಯವಹಾರ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನೀವು ಖಾದಿ ಗ್ರಾಮೋದ್ಯೋಗ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದುದ್ದರಿಂದ ನಿಮಗೆ ಹಣಕಾಸಿನ ವ್ಯವಹಾರ ಸಂಪೂರ್ಣವಾಗಿ ತಿಳಿದಿದ್ದು ನೀವು ಹೇಳುವಂತೆ ಆರೋಪಿಗೆ ಹಣವನ್ನು ನೀಡಿದ್ದ ಪಕ್ಷದಲ್ಲಿ ನೀವು ಆರೋಪಿಯಿಂದ ಸೂಕ್ತ ದಾಖಲೆಯನ್ನು ಬರೆಸಿಕೊಳ್ಳುತ್ತಿದ್ದು, ನೀವು ಆರೋಪಿಗೆ ಯಾವುದೇ ಹಣ ನೀಡದೇ ಇರುವುದರಿಂದ ನೀವು ಆತನಿಂದ ಯಾವುದೇ ದಾಖಲೆಯನ್ನು

ಬರೆಸಿಕೊಂಡಿರುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿ ಆರೋಪಿ ನನ್ನ ತಂಗಿ ಮಗನಾದ್ದರಿಂದ ಆತನಿಂದ ಯಾವುದೇ ದಾಖಲೆಯನ್ನು ಬರೆಸಿಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿ ನನ್ನ ತಂಗಿ ಮಗನಾಗಿದ್ದರಿಂದ ಆತನಿಂದ ಯಾವುದೇ ದಾಖಲೆಯನ್ನು ಬರೆಸಿಕೊಂಡಿರುವುದಿಲ್ಲ ಎಂದು ಹೇಳುತ್ತಿರುವುದು ಸುಳ್ಳು ಎಂದರೆ ಸರಿಯಲ್ಲ. ಆರೋಪಿಯ ತಾಯಿಯವರು ನನ್ನ ಮತ್ತು ನನ್ನ ಸಹೋದರ, ತಾಯಿ ಮತ್ತು ಸಹೋದರಿಯರ ವಿರುದ್ಧ ವಿಭಾಗಕ್ಕಾಗಿ ದಾವೆ ಸಲ್ಲಿಸಿರುವುದರಿಂದ ಆರೋಪಿ ತಾಯಿಯವರಿಗೆ ಬುದ್ಧಿ ಕಲಿಸುವ ಉದ್ದೇಶದಿಂದ ಆರೋಪಿ ವಿರುದ್ಧ ಈ ಪ್ರಕರಣವನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಸಹೋದರ ಆರೋಪಿ ತಾಯಿಯವರು ವಿಭಾಕ್ಕಾಗಿ ಸಲ್ಲಿಸಿರುವ ದಾವೆಯನ್ನು ಹಿಂಪಡೆಯದೇ ಇದ್ದ ಪಕ್ಷದಲ್ಲಿ ಉಳಿದಿರುವ ಚೆಕ್ಕುಗಳನ್ನು ಬೇರೆಯವರ ಮುಖೇನ ಹಾಕಿಸುವುದಾಗಿ ಬೆದರಿಕೆಯನ್ನು ಒಡ್ಡುತಿರುತ್ತೇವೆ ಎಂದರೆ ಸರಿಯಲ್ಲ.

(ಮುಂದುವರೆದ ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಸಮಯಾವಕಾಶವನ್ನು ಕೋರಿದ್ದು ಸಮಯಾವಕಾಶವನ್ನು ನೀಡಲಾಯಿತ)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**2 ನೇ ಕಿ.ಪ್ರ.ದ. ನ್ಯಾ ದಂ. ನಂಜನಗೂಡು**